ಶ್ರೀ ಬಿ. ರಾಚಯ್ಯ (ಗೃಹ ಖಾತೆ ಸಚಿವರು).—ಇದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ. ಆದರೆ ಅಪರಾಧಿಗಳು ಯಾರು ಎಂದು ಇದುವರೆಗೂ ಪತ್ತೆ ಆಗಿಲ್ಲ. ಪತ್ರಿಕೆಗಳಲ್ಲಿ ಮತ್ತು ರೇಡಿಯೋ ಮೂಲಕ ಪ್ರಕಟಣೆ ಕೂಡ ಕೊಡುತ್ತಿದ್ದೇವೆ. ಆದರೂ ಪತ್ತೆ ಆಗಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ಪೋಲೀಸ್ ಅಧಿಕಾರಿಗಳಿಗೆ, ಸರ್ಕಾರಕ್ಕೆ, ಮಂಖ್ಯಮಂತ್ರಿಯವರಿಗೆ ಆಕೆ ಮನವಿಗಳನ್ನು ಕಳುಹಿಸಿ ಈರೀತಿ ನನ್ನ ಪತಿ ಕಾಣೆಯಾಗಿದ್ದಾರೆ, ಇದರ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿ ೭—೮ ತಿಂಗಳಾದರೂ ಇದುವರೆಗೂ ಅವರು ಪತ್ತೆ ಆಗಿಲ್ಲ. ನನಗೆ ಇಂಥಿಂಥ ವ್ಯಕ್ತಿಗಳ ಮೇಲೆ ಅನುಮಾನ ಇದೆ, ಅವರೇ ನನ್ನ ಗಂಡನನ್ನು ಕೊಲೆ ಮಾಡಿರಬಹುದು. ಆದ್ದರಿಂದ ಅವರನ್ನು ಬಂಧಿಸಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಆನಂದಮೂರ್ತಿಯವರ ಹೆಂಡತಿ ದೂರು ಕೊಟ್ಟಿದ್ದಾರೆ. ಸಂಪಾದನೆ ಮಾಡಿ ಸಂಸಾರವನ್ನು ನಡೆಸುತ್ತಿದ್ದ ವ್ಯಕ್ತಿ ಈಗ ಇಲ್ಲದಿರುವುದರಿಂದ ಆ ಸಂಸಾರದ ಗತಿ ಏನು? ಅವರು ಯಾವರೀತಿ ಜೀವನ ಮಾಡಬೇಕು? ನಿರ್ದಿಷ್ಟವಾಗಿ ಯಾರಯಾರ ಮೇಲೆ ಆಕೆ ಆರೋಪ ಮಾಡಿದ್ದಾರೆಂದು ದೂರಿನಲ್ಲಿ ತಿಳಿಸಿದ್ದಾರೆ ಅದಕ್ಕೆ ಸಂಬಂಧಪಟ್ಟ ಕಾಗದಪತ್ರಗಳನ್ನೆಲ್ಲಾ ತಮಗೆ ಕಳುಹಿಸಿಕೊಡುತ್ತೇನೆ. ಇದರ ಆಧಾರದ ಮೇಲೆ ತಾವು ತನಿಖೆ ನಡೆಸಿದರೆ ಸುಲಭವಾಗಿ ಆರೋಪಿಗಳನ್ನು ಪತ್ತೆ ಹಚ್ಚುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಬಿ. ರಾಚಯ್ಯ.—ತಮ್ಮ ಹತ್ತಿರ ಇರತಕ್ಕ ಕಾಗದಪತ್ರಗಳನ್ನು ನನಗೆ ಕಳುಹಿಸಿಕೊಡಿ. ಅದನ್ನು ಡಿ ಐ.ಜಿ ಯವರಿಗೆ ಕಳುಹಿಸಿಕೊಡುತ್ತೇವೆ. ಅವರು ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತಾರೆ.

(v) ನಂದಿಹಳ್ಳಿ ಸ್ನಾತಕೋತ್ತರದಿಂದ ಕೆಲವು ವಿಷಯಗಳನ್ನು ಬೇರೆಡೆಗೆ ವರ್ಗಾಯಿಸುವುದು.

ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಅಧ್ಯಕ್ಷರೆ, ನಂದಿಹಳ್ಳಿ ಸ್ನಾತಕೋತ್ತರ ಕೇಂದ್ರ ಕರ್ನಾಟಕದ ಶಾಂತಿಕೇತನ. ಈಗಾಗಲೇ ಭೂಗರ್ಭ ಶಾಸ್ತ್ರದ ಸ್ನಾತಕೋತ್ತರ ಪದವಿಗಳಿಗಾಗಿ ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಒಂದು ಶಾಖೆಯನ್ನಾಗಿ ಅಭಿವೃದ್ಧಿಪಡಿಸುವಲ್ಲಿ ೩.೫೦ ಕೋಟಿ ಅಲ್ಲಿ ವ್ಯಯವಾಗಿದೆ. ಈಗಾಗಲೇ ಸರ್ಕಾರ ಈ ಶೈಕ್ಷಣಿಕ ವರ್ಷದಲ್ಲಿ ಕನ್ನಡ ಮತ್ತು ಗಣಿತಕ್ಕೆ ೧೫ ಮತ್ತು ೧೫ ಸ್ಥಾನಗಳನ್ನು ಭರ್ತಿಮಾಡಿ ವ್ಯಾಸಂಗ ಪ್ರಾರಂಭಿಸಿದ್ದಾರೆ. ಈ ಶಾಖೆಯಿಂದ ಕನ್ನಡ ಮತ್ತು ಗಣಿತ ಶಾಸ್ತ್ರಗಳನ್ನು ಪ್ರಾರಂಭಿಸುವ ಉದ್ಘಾಟನೆ ಸಮಾರಂಭಕ್ಕೆ ಶಿಕ್ಷಣ ಸಚಿವರು ತಾ. ೪-೮-೧೯೮೫ಕ್ಕೆ ಅಧಿಕೃತ ಕಾರ್ಯಕ್ರಮ ಕೊಟ್ಟಿರುತ್ತಾರೆ.

ಡಾ॥ ಎಡ್ಕೆ ಸಮಿತಿ ನಂದಿಹಳ್ಳಿಯಲ್ಲಿ ಭೂಗರ್ಭ ಶಾಸ್ತ್ರವಲ್ಲದೆ ಉಳಿದ ವಿಷಯಗಳಿಗೆ ಅಧ್ಯಯನ ಶಾಖೆ ಮಾಡಬಾರದೆಂದು ಹೇಳಿಲ್ಲ. ಹೀಗಿರುವಾಗ ಗುಲ್ಬರ್ಗಾ ವಿಶ್ವವಿದ್ಯಾನಿಲಯದ ತೀರ್ಮಾನದ ನಂತರ ನಂದಿಹಳ್ಳಿ ಸ್ನಾತಕೋತ್ತರ ಕೇಂದ್ರದಲ್ಲಿ ಸಧ್ಯ ಪ್ರಾರಂಭಿಸಿರುವ ವಿಷಯಗಳು ಮತ್ತು ಪ್ರಾರಂಭಿಸಬೇಕಾದ ವಿಷಯಗಳನ್ನು ಬೇರೆಕಡೆಗೆ ವರ್ಗ ಮಾಡುವ ವದಂತಿ ಕೇಳಿಬರುತ್ತಿರುವುದು ನಿಜವೆ? ಹಾಗಿದ್ದಲ್ಲಿ, ನಂದಿಹಳ್ಳಿ ಪಿ.ಜಿ. ಕೇಂದ್ರ ಉದ್ಘಾಟನೆಗೆ ಮಾನ್ಯ ಶಿಕ್ಷಣ ಸಚಿವರು ಅಧಿಕೃತ ಕಾರ್ಯಕ್ರಮ ಕೊಟ್ಟಿದ್ದು, ಸರ್ಕಾರ ಈಗ ತನ್ನ ನೀತಿಯನ್ನು ಬದಲಿಸುತ್ತಿರುವುದು, ಆ ಭಾಗದ ಜನತೆಯ ಮನಸ್ಸಿನಮೇಲೆ ಪರಿಣಾಮ ಬೀರಿದ್ದು ಮುಷ್ಕರ ಮತ್ತು ಬಾರದ ಕಾರ್ಯಕ್ರಮಕ್ಕೆ ಅವಕಾಶ ಮಾಡಿಕೊಟ್ಟಿದೆ. ಈ ರೀತಿಯ ಗೊಂದಲಕ್ಕೆ ಸರ್ಕಾರ ದಾರಿ ಮಾಡುತ್ತಿರುವುದು ಖಂಡನೀಯ.

ಆದ್ದರಿಂದ ನಂದಿಹಳ್ಳಿ ಪಿ.ಜಿ. ಕೇಂದ್ರವನ್ನು ಉಳಿಸಿ ಮತ್ತು ಬೇರೆ ವಿಷಯಗಳನ್ನು ಪ್ರಾರಂಭಿಸಿ ಅಭಿವೃದ್ಧಿಪಡಿಸಲು ಸರ್ಕಾರದ ಸ್ಪಷ್ಟ ನಿಲುವನ್ನು ತಿಳಿಸಬೇಕೆಂದು ನಾನು ಶಿಕ್ಷಣ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ (ಮಾನ್ಯ ವಿದ್ಯಾ ಸಚಿವರು).—ಮಾನ್ಯ ಸಭಾಧ್ಯಕ್ಷರೆ, ಈ ವಿಷಯ ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಿದ್ದುದು. ಆದ್ದರಿಂದ ನಾಳೆಯ ದಿವಸ ನಾನು ಇದಕ್ಕೆ ಉತ್ತರವನ್ನು ಕೊಡುತ್ತೇನೆ

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಬರುವ ಳಿನೇ ತಾರೀಖಿಂ ಅಲ್ಲಿಗೆ ತಮ್ಮ ಕಾರ್ಯಕ್ರಮವನ್ನು ಕೊಟ್ಟಿದ್ದಾರೆ. ಇದು ಅವರಿಗೆ ಸ್ಪಷ್ಟವಾಗಿ ಗೊತ್ತಿದೆ. ಆದರೂ ಕೂಡ ನಾಳೆ ಇದಕ್ಕೆ ಉತ್ತರ ಕೊಡುತ್ತೇನೆಂದು ಅವರು ಹೇಳುವುದು ಸರಿಯಲ್ಲ. ಳನೇ ತಾರೀಖಿಂ ಸಚಿವರಿಂ ಅಲ್ಲಿಗೆ ಬರುವುದಾಗಿ ತಿಳಿಸಿದ್ದಾರೆ. ಈಗ ಆ ಭಾಗದ ಜನತೆಯು ಮನಸ್ಸಿನಮೇಲೆ ದುಷ್ಪರಿಣಾಮ ಬೀರಿ ಅವರು ಮುಷ್ಕರ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದೆ.

ಅಧ್ಯಕ್ಷರು.— ತಾವು ಷಿಫಾರಸು ನಿಯಮದ ಪ್ರಕಾರ ವಿಷಯವನ್ನು ಸರ್ಕಾರದ ಗಮನಕ್ಕೆ ತಂದಿದ್ದೀರಿ. ಮಾನ್ಯ ಸಚಿವರು ನಾಳೆ ಉತ್ತರ ಕೊಡುತ್ತೇನೆಂದು ಹೇಳುತ್ತಿದ್ದಾರೆ.

ಶ್ರೀ ಯು. ಭೂಪತಿ.— ಸ್ವಾಮಿ, ನಿಯಮ ಷಿಫಾರಸು ಕೆಳಗೆ ವಿಷಯವನ್ನು ಸರ್ಕಾರಂದ ಗಮನಕ್ಕೆ ಯಾವ ಕಾರಣಕ್ಕಾಗಿ ತರಬೇಕು.? ಅದರ ಮಹತ್ವ ಏನೆಂಬುದು ನನಗೂ ಗೊತ್ತಿದೆ. ಆದರೆ ಮಾನ್ಯ ಸಚಿವರು ಳ-೦-೮೫ರಂದು ಅಲ್ಲಿಗೆ ಬರುವುದಾಗಿ ಕಾರ್ಯಕ್ರಮವನ್ನು ಕೊಟ್ಟಿದ್ದಾರೆ. ವಾಸ್ತವಾಂಶ ಏನು ಎಂಬುದನ್ನು ಹೇಳದೆ ನಾಳೆ ಉತ್ತರ ಕೊಡುತ್ತೇನೆಂದು ಹೇಳುವುದು ಸರಿಯಲ್ಲ.

ಅಧ್ಯಕ್ಷರು.— ತಾವು ದಯವಿಟ್ಟು ಕುಳಿತುಕೊಳ್ಳಿ. ತಾವು ಸರ್ಕಾರದ ಗಮನಕ್ಕೆ ವಿಷಯವನ್ನು ತಂದಿದ್ದೀರಿ. ಮಾನ್ಯ ಸಚಿವರು ನಾಳೆ ಉತ್ತರವನ್ನು ಕೊಡಂತ್ತಾರಂತೆ.

ಶ್ರೀ ಯು. ಭೂಪತಿ.— ಸ್ವಾಮಿ, ಮಾನ್ಯ ಸಚಿವರಿಗೆ ಈ ವಿಷಯ ಗೊತ್ತೇ ಇಲ್ಲದಿದ್ದರೆ ನಾನು ಕೇಳುವುದಿಲ್ಲ. ಆದರೆ ಅವರಿಗೆ ತಿಳಿದಿರುವುದರಿಂದ ಇರುವ ವಿಚಾರವನ್ನು ಹೇಳುವುದಕ್ಕೆ ಏತಕ್ಕೆ ಅವರು ಹಿಂದುಮುಂದು ನೋಡುತ್ತಿದ್ದಾರೆ?

ಶ್ರೀ ಎಂ. ರಘುಪತಿ.— ನಾಳೆ ನಾನು ಉತ್ತರವನ್ನು ಕೊಡುತ್ತೇನೆ.

VI ಶಿಕಾರಿಪುರ ತಾಲ್ಲೂಕು ಈಸನೂರು ಗ್ರಾಮದ ದೇವಾಂಗ ಸಮಾಜದ ಮುಖಂಡರಿಂದ ಆಗುತ್ತಿರುವ ಶೋಷಣೆ

ಶ್ರೀ ವಸಂತ ಬಂಗೇರ (ಬೆಳ್ತಂಗಡಿ).— ಮಾನ್ಯ ಅಧ್ಯಕ್ಷರೇ, ಶಿವಮೊಗ್ಗಾ ಜಿಲ್ಲಾ ಶಿಕಾರಿಪುರ ತಾಲ್ಲೂಕು ಈಸನೂರು ಗ್ರಾಮದ ದೇವಾಂಗ ಸಮಾಜದ ಮುಖಂಡರುಗಳಿಂದ ಆಗುತ್ತಿರುವ ಅನ್ಯಾಯ ಅತ್ಯಾಚಾರ, ಮುಗ್ಧ ಹೆಣ್ಣು ಮಕ್ಕಳಿಗೆ ದಂಡ ಹಾಕುವುದು ಇನ್ನೂ ಅನೇಕ ದುಷ್ಟ ಚಟುವಟಿಕೆಯನ್ನು ಅವರು ಮಾಡುತ್ತಾ ಬರುತ್ತಿರುವುದು ಈ ದುಷ್ಟ ೧೨ ಜನರು ಯಜಮಾನರುಗಳು ಈ ಶ್ರೀ ಬನಶಂಕರಿ ದೇವಸ್ಥಾನದಲ್ಲಿ ಸೇರಿ ಸುಮಾರು ೩೦ ವರ್ಷಗಳಿಂದಲೂ ಪಂಚಾಯಿತಿ ಮಾಡುತ್ತಾ ಬರುತ್ತಿದ್ದಾರೆ. ಯಜಮಾನರಿಗೆ ಪಂಚಾಯ್ತಿ ಮಾಡುವರಿಗೆ ಅರ್ಜಿ ಕೊಡುವಾಗ ರೂಪಾಯಿ ೫ನ್ನು ಕೊಡಬೇಕು, ಮತ್ತು ಬ್ರಾಂದಿ, ಸಾರಾಯಿ ಕಡಿಸಿಕೊಳ್ಳಿ ಊಟ ಮಾಡಿಸಿ ತೃಪ್ತಿಪಡಿಸಿದರೆ ಮಾತ್ರ ಪಂಚಾಯಿತಿ ಮಾಡುತ್ತಾರೆ. ಇಲ್ಲದಿದ್ದರೆ ಮಾಡುವುದೇ ಇಲ್ಲ. ದೇವಾಂಗ ಸಮಾಜದ ಜನಗಳು ಕೋರ್ಟ್‌ಗಾಗಲಿ ಪೋಲೀಸ್ ಠಾಣೆಗಳಿಗಾಗಲಿ ಇಲ್ಲವೇ ಯಾವುದೇ ಇಲಾಖೆಯ ಅಧಿಕಾರಿಗಳನ್ನು ಭೇಟಿ ಮಾಡಿ ತಮ್ಮ ತೊಂದರೆ ಹಾಗೂ ಕಷ್ಟಗಳನ್ನು ಹೇಳಿಕೊಳ್ಳಲು ಅಲ್ಲಿ ಅವಕಾಶವಿಲ್ಲ. ಆದರ ಬದಲಾಗಿ ಎಲ್ಲಾ ವಿಚಾರಕ್ಕೂ ಯಜಮಾನರುಗಳಿಗೆ ತಿಳಿಸಿ ಯಜಮಾನರ ಕಟ್ಟು ಆಜ್ಞೆಯಂತೆ ಸಮಾಜದ ಜನರು ನಡೆಯಬೇಕು, ಯಜಮಾನರು ಹೇಳಿದಂತೆ ಕೇಳಬೇಕು. ಇವರು ಪಂಚಾಯಿತಿ ಮಾಡಿ ದಂಡ ಹಾಕಿದಗೆ ತೆರಬೇಕು. ಇಲ್ಲವಾದರೆ ಅವರಿಗೆ ಬಹಿಷ್ಕಾರ ಹಾಕುವುದು ಪ್ರಾಣದ ಬೆದರಿಕೆ ಹಾಕುವುದು ಈ ಎಲ್ಲಾ ವಿಚಾರ ಶ್ರೀ ಬನಶಂಕರಿ ದೇವಸ್ಥಾನದಲ್ಲಿ ನಡೆಯುತ್ತಿರುವುದು.

೧) ಸಮಾಜದ ಮತ್ತೋರ್ವರು ಚನ್ನಬಸಮ್ಮ ಎಂಬ ವಿಧವೆ ತಪ್ಪು ಮಾಡಿದಳೆಂದು ಆಕೆಯನ್ನು ಶ್ರೀ ಬನಶಂಕರಿ ದೇವಸ್ಥಾನಕ್ಕೆ ಎಳೆತಂದು ಕಟ್ಟಿಹಾಕಿ ಹುಣಸೆ ಬೀಳಲಿಂದ ಹೊಡೆದು ಪಂಚಾಯಿತಿ ಮಾಡಿ ರೂ. ೩೧೦೦ ದಂಡವನ್ನು ಹಾಕಿದರು. ದಂಡ ತೆರಲು ಶಕ್ತಿ ಇಲ್ಲದೆ ಆ ವಿಧವೆ ತನ್ನ ಹೆಸರಿವಲ್ಲಿದ್ದ ೧ ಎಕರೆ ೧೦ ಗುಂಟೆಯನ್ನು ದೇವರ ಹೆಸರಿನಲ್ಲಿ ದಾನ ಪತ್ರ ಮಾಡಿ ಕೊಟ್ಟಿದ್ದಾಳೆ. ಇದೇ ಸಮಾಜದ ಸೀತಮ್ಮ ಕಡೇ ಮನೆ ನೀಲಮ್ಮ ಮತ್ತು ಕವಡೆ ಚಂದಮ್ಮ ಇವರುಗಳು ಪ್ರೀತಿಸಿದವರನ್ನು ಮದುವೆಯಾಗಲು ಬಿಡದೆ ಅವರಿಗೆ ದಂಡ ಹಾಕಿ ಪುಕೃತ ಅವರೆಲ್ಲರೂ ಬೀದಿಪಾಲಾಗಿದ್ದಾರೆ. ಇದಲ್ಲದೆ ಅನೇಕ ಜನರಿಂದ ಜಮೀನು ಕೊಡಿಸುವುದು ಅಥವಾ ಇನ್ನಾವುದೇ ಕೆಲಸವನ್ನು ಮಾಡಿಸಿ ಕೊಡುವುದಾಗಿ ಭರವಸೆ